**ದಿಃ 12.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಆರ್ ಬಿ ವಕೀಲರಿಂದಃ

ಐಟಂ ನಂಬರ್ -1 ಮತ್ತು 2 ಸ್ವತ್ತುಗಳಿಗೆ ಸಂಬಂಧಿಸಿದಂತೆ ಖಾತೆಯಲ್ಲಿರುವ ಹಾಗೇ ಆರ್ ಟಿ ಸಿ ಯಲ್ಲೂ ನಮೂದು ಇರುತ್ತದೆ. ಸಾಕ್ಷಿ ಪುನಃ ನಮಗೆ ನೋಟೀಸು ಮಾಡದೇ ಆ ರೀತಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ದಿನಾಂಕ 02.03.2009ರಂದು ತೀರಿಕೊಂಡಿದ್ದು, ದಿನಾಂಕ 04.03.2009 ರಂದು ಆರ್ ಟಿ ಸಿ ಯಲ್ಲಿ ಹೆಸರನ್ನು ಸೇರಿಸಲು ವಾದಿ ಮತ್ತು ಅವರ ಗಂಡ ಅರ್ಜಿ ಕೊಟ್ಟಿರುತ್ತಾರೆ. ಅದಕ್ಕೆ ನೀವೇನು ಆಕ್ಷೇಪ ಹಾಕಿದ್ದುಂಟಾ ಎಂದರೆ ಸಾಕ್ಷಿದಾರರು ಆ ಸ್ಥಳ ನನಗೆ ಸೇರದ ಕಾರಣ ಆಕ್ಷೇಪ ಹಾಕಿಲ್ಲವೆನ್ನುತ್ತಾರೆ. ಸದರಿ ಜಾಗ 7ನೇ ಪ್ರತಿವಾದಿ ಫ್ಲೋರಿನ್ ಪಿಂಟೋ ಯಾನೆ ಡಿಸಿಲ್ವಾ ಯವರಿಗೆ ಸೇರಿದ್ದು. ಹಾಗೇ ಕೊಟ್ಟಂತಹ ಅರ್ಜಿಯನ್ನು ನಾನು ನೋಡಿದ್ದಿಲ್ಲ, ಆದರೆ ವಿಲೇಜ್ ಅಕೌಂಟೆಂಟ್ ರವರು ಹೇಳಿದ್ದರು. 7ನೇ ಪ್ರತಿವಾದಿಯವರಿಗೆ ಆ ಜಾಗ ಹೇಗೆ ಸೇರಿದ್ದು ಎಂದರೆ ಅವರ ತಂದೆ ಎಲ್ಲಾ ಮಕ್ಕಳ ಸಮಕ್ಷಮ ಓರಲ್ ಸೆಟಲ್ ಮೆಂಟಿನ ಅಡಿ ನೀಡಿದ್ದರು ಎನ್ನುತ್ತಾರೆ. ಆ ಬಗ್ಗೆ ರಿಟನ್ ಡಾಕ್ಯೂಮೆಂಟ್ ಇದಯೇ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರ್ ಟಿ ಸಿ ಯಲ್ಲಿ ಹೆಸರು ಬದಲಾವಣೆ ಆದ ವಿಚಾರವನ್ನು 7ನೇ ಪ್ರತಿವಾದಿಗೆ 2009ರಲ್ಲಿ ನನ್ನ ಗಮನಕ್ಕೆ ಬಂದ ಕೂಡಲೇ ತಿಳಿಸಿರುತ್ತೇನೆ. ಸದರಿಯವರು ಆಕ್ಷೇಪ ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

2. ಐಟಂ ನಂಬರ್ 1 ಮತ್ತು 2ರಲ್ಲಿ ಹಣ್ಣು ಹಂಪಲು ಗಿಡಗಳು ಇದೆ. ಸದರಿ ಕೃತಾವಳಿಗಳನ್ನು ಅಜ್ಜನ ಕಾಲದಿಂದ ಮಾಡಿದ್ದು, ಅದನ್ನು 7ನೇ ಪ್ರತಿವಾದಿಯವರು ನೋಡಿಕೊಳ್ಳುತ್ತಿದ್ದಾರೆ. 7ನೇ ಪ್ರತಿವಾದಿಯವರು ಮದುವೆಯಾದ ನಂತರ ಮುಂಬಯಿಯಲ್ಲಿ ವಾಸವಿದ್ದಾರೆ. ಅವರಿಗೆ ಸುಮಾರು 1966ನೇ ಸಾಲಿನಲ್ಲಿ ಮದುವೆಯಾಗಿರಬಹುದು. ಅವರಿಗೆ 4 ಮಂದಿ ಮಕ್ಕಳು, ಅವರೂ ಕೂಡಾ ಮುಂಬಯಿಯಲ್ಲಿಯೇ ಇದ್ದಾರೆ. 7ನೇ ಪ್ರತಿವಾದಿಯವರು ಪ್ರತೀವರ್ಷ ದಾವಾ ಸ್ವತ್ತಿಗೆ ಬರುತ್ತಿರುತ್ತಾರೆ.

3. ಐಟಂ ನಂಬರ್ 1 ಮತ್ತು 2 ಸ್ವತ್ತುಗಳು ಮತ್ತು ಇತರೇ ಸ್ವತ್ತುಗಳು ಕುಟುಂಬದ ಸ್ವತ್ತುಗಳು ಎಂದರೆ ಸಾಕ್ಷಿ ಐಟಂ ನಂಬರ್ 1 ಮತ್ತು 2 ಸ್ವತ್ತುಗನ್ನು ಕಾಮಿಲ್ ಡಿಸಿಲ್ವಾರವರು ಖರೀದಿಸಿದ್ದು ಇರುತ್ತದೆ, 3 ರಿಂದ 6ನೇ ಐಟಂ ಸ್ವತ್ತುಗಳು

ದಾರ್ಕಾಸ್ತು ನಲ್ಲಿ ಅವರಿಗೆ ಮಂಜೂರಾಗಿತ್ತು, 7 ಮತ್ತು 8ನೇ ಸ್ವತ್ತುಗಳನ್ನು ಕಾಮಿಲ್ ಡಿಸಿಲ್ವಾರವರ ಮರಣಾ ನಂತರ ಜೆ.ಬಿ.ಡಿಸಿಲ್ವಾರವರು ಖರೀದಿ ಮಾಡಿದ್ದರು.

4. ಐಟಂ ನಂಬರ್ 1 ರಿಂದ 6 ಸ್ವತ್ತುಗಳು ಕಾಮಿಲ್ ಡಿಸಿಲ್ವಾರವರ ಹೆಸರಿನಲ್ಲಿದ್ದವು ಎಂದರೆ ಸರಿ. ಅವರು ಜೀವಂತ ಇರುವವರೆಗೆ ಅವರೇ ಸದರಿ ಸ್ವತ್ತುಗಳ ಉಸ್ತುವರಿ ಮಾಡುತ್ತಿದ್ದರು ಎಂದರೆ ಸರಿ. ಕಾಮಿಲ್ ಡಿಸಿಲ್ವಾ ರವರ ಮರಣಾ ನಂತರ ನಮ್ಮ ತಂದೆ ಪ್ಯಾಟ್ರಿಕ್ ಡಿಸಿಲ್ವಾರವರು ಉಸ್ತುವರಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

5. ನಾನು ಹೇಳಿದ ಹಾಗೇ ಓರಲ್ ಸೆಟಲ್ ಮೆಂಟ್ ಆಗಿದ್ದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಮಸ್ಟಿ ಹಕ್ಕಿನ ಆಸ್ತಿಯಿದ್ದು ಆರ್ ಟಿ ಸಿ ಯಲ್ಲಿ ನಮೂದಿಸಿದ ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಅಜ್ಜ ಕಾಮಿಲ್ ಡಿಸಿಲ್ವಾ ರವರಿಗೆ ಜೀವಿತ ಕಾಲದಲ್ಲಿ ಕೆಂಪು ಕಲ್ಲಿನ ಗಣಿಗಾರಿಕೆ ಮಾಡುತ್ತಿದ್ದು ಆ ಬಗ್ಗೆ ಲೈಸೆನ್ಸ್ ಇತ್ತು ಎಂದರೆ ಸರಿ. ಅಜ್ಜ ಕಾಮಿಲ್ ಡಿಸಿಲ್ವಾರವರ ನಂತರ ನನ್ನ ತಂದೆ ಕೂಡಾ ಸದರಿ ಗಣಿಗಾರಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕಾಮಿಲ್ ಡಿಸಿಲ್ವಾ ರವರಿಗೆ ನೀಡಿದ ಲೈಸೆನ್ಸ್ ಪ್ರಕಾರ ನಮ್ಮ ತಂದೆಯವರು ಗಣಿಗಾರಿಕೆ ಕೆಲಸ ಮುಂದುವರಿಸಿದ್ದರು ಎದಂರೆಸ ರಿಯಲ್ಲ. ಗಣಿಗಾರಿಕೆಯನ್ನು ಐಟಂ ನಂಬರ್ 1 ಮತ್ತು 2 ಸ್ವತ್ತುಗಳಲ್ಲಿ ಮಾಡಲಾಗುತ್ತಿತ್ತು. ಆದರೆ ಈಗ ಗಣಿಗಾರಿಕೆ ಮಾಡಲಾಗುತ್ತಿಲ್ಲ.

6. ನನ್ನ ತಂದೆ ಪ್ಯಾಟ್ರಿಕ್ ಡಿಸಿಲ್ವಾ ರವರ ಹೆಸರಿಗೆ ಮೂರು ಸರ್ವೆ ನಂಬರಿನಲ್ಲಿ ಸುಮಾರು 11.20 ಎಕರೆ ಪ್ರಾಪರ್ಟಿ ಪ್ರತ್ಯೇಕವಾಗಿ ಇತ್ತು ಎಂದರೆ ಸರಿ. ಸದರಿ ಆಸ್ತಿ ದಾವಾ ಆಸ್ತಿಯ ಪಕ್ಕದಲ್ಲೇ ಇತ್ತು ಎಂದರೆ ಸರಿಯಲ್ಲ. ಈ ಹಿಂದೆ 161/1999 ದಾವೆಯಲ್ಲಿ ಹಕ್ಕು ಖುಲಾಸೆ ಪತ್ರ ಪ್ರಕಾರ ಹಕ್ಕು ಬಂದಿದೆ ಎಂದು 6,7 ಪ್ರತಿವಾದಿಗಳು ಜೆ ಬಿ ಡಿಸಿಲ್ವಾರವರು ಹಕ್ಕು ಬಿಟ್ಟು ಕೊಟ್ಟಿದ್ದನ್ನು ಅಲ್ಲಗಳೆದಿದ್ದರು ಎಂದರೆ ಸರಿ. ಸದರಿ ಮೇಲೆ ಹೇಳಿದ ಮೂವರೂ ಅಧಿಕಾರ ಪತ್ರದ ಆಧಾರದ ಮೇಲೆ ನಾನು ಸದರಿ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟದ್ದು ಎಂದರೆ ಸರಿ, ಸಾಕ್ಷಿ ಪುನಃ ಮೂರು ಕಂಡೀಶನ್ ಹಾಕಿದ್ದು ಅದರ ಪ್ರಕಾರ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟದ್ದು ಎನ್ನುತ್ತಾರೆ.

ಮೊದಲನೇ ಕಂಡೀಶನ್ 11.22 ಎಕರೆ ಜಾಗವು ಪ್ಯಾಟ್ರಿಕ್ ಡಿಸಿಲ್ವಾರವರ ಗಂಡು ಮಕ್ಕಳಿಗೆ ಒಳಪಟ್ಟಿದ್ದು ಎಂಬುದು

ಎರಡನೇ ಕಂಡೀಶನ್ 4 ಮತ್ತು 5ನೇ ಪ್ರತಿವಾದಿಯವರು ಮದುವೆ ಆಗದ ಕಾರಣ ಅವರ ಮದುವೆಯನ್ನು ನಾವೇ ಗಂಡುಮಕ್ಕಳು ಮಾಡತಕ್ಕದ್ದು ಎಂಬುದು

ಮೂರನೇ ಕಂಡೀಶನ್ ಮದುವೆಯಾಗಿ ಕೊಟ್ಟ ಹೆಣ್ಣು ಮಕ್ಕಳ ಗಂಡಂದಿರು ತೀರಿಕೊಂಡರೆ ಹೆಣ್ಣುಮಕ್ಕಳನ್ನು ನೋಡಿಕೊಳ್ಳುವುದು ಎಂಬುವುದು

7. ಸದರಿ ಕಂಡೀಶನ್ ಬಗ್ಗೆ ದಾಖಲೆ ಆಗಿದ್ದು ಅದನ್ನು ಪ್ಯಾಟ್ರಿಕ್ ಡಿಸಿಲ್ವಾರವರ ಕೈಗೆ ನೀಡಲಾಗಿತ್ತು ಆ ಬಗ್ಗೆ ವಿಲ್ ಸಹಾ ಮಾಡಿದ್ದರು ಮತ್ತು ರಿಲೀಸ್ ಡೀಡ್ ಮಾಡಲಾಗಿತ್ತು. ಸದರಿ ಕಂಡೀಶನ್ ಗಳು ಇರುವ ಬಗ್ಗೆ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೊಟ್ಟ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಅಂತಹ ದಾಖಲೆ ನನ್ನ ಬಳಿ ಇರಲಿಲ್ಲ, ಅದನ್ನು ಪ್ಯಾಟ್ರಿಕ್ ಡಿಸಿಲ್ವಾರವರಿಗೆ ಕೊಟ್ಟಿದ್ದರು ಎನ್ನುತ್ತಾರೆ. ನನ್ನ ಹೆಸರಿಗೆ ಪವರ್ ಆಫ್ ಅಟಾರ್ನಿ ಯಾರೂ ಬರೆದು ಕೊಟ್ಟಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎಂದರೆ ನನಗೆ ನೆನಪಿಲ್ಲ.ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಹಕ್ಕು ಖುಲಾಸೆ ಪತ್ರದಲ್ಲಿ ರುವ ಜೆ ಡಿಸಿಲ್ವಾ ನನ್ನ ಹೆಸರು ಅಲ್ಲ ಎಂದು ಅಲ್ಲಗಳೆದಿದ್ದೇನೆ ಎಂದರೆ ನನಗೆ ನೆನಪಿಲ್ಲ.

8. ನನ್ನ ಹೆಸರು ಜಫ್ರೀ ಜಿಯೋ ಡಿಸಿಲ್ವಾ ಎಂಬ ಹೆಸರಿನಲ್ಲಿ ಮಾತ್ರ ವ್ಯವಹಾರ ಮಾಡುತ್ತಿದ್ದೇನೆ. ಜಫ್ರೀ ಜಿಯೋ ಡಿಸಿಲ್ವಾ ಹೆಸರನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೇ ಹೆಸರಿಲ್ಲ, ಬೇರೆ ಹೆಸರಿನಲ್ಲಿ ನಾನು ಯಾವುದೇ ವ್ಯವಹಾರ ಮಾಡಿದ್ದಿಲ್ಲ. ನನ್ನ ಸಹಿಗಳನ್ನೂ ಕೂಡಾ ಬೇರೆ ಬೇರೆ ಸಂದರ್ಭಕ್ಕೆ ತಕ್ಕಂತೆ ಸಹಿ ಮಾಡಿ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

9. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ ನಂ.17ರಲ್ಲಿ ಹೇಳಿರುವಂತೆ ಫ್ಲೋರಿನ್ ರವರು ಆರ್ಥಿಕದಲ್ಲಿ ಸಂಕಷ್ಟದಲ್ಲಿದ್ದಾರೆ ಎಂಬ ವಿಷಯವನ್ನು ಯಾರು ಹೇಳಿದ್ದು ಎಂದರೆ ನನಗೆ ಸ್ವತಃ ಮಾಹಿತಿ ಇತ್ತು ಎನ್ನುತ್ತಾರೆ. ಅಸಲು ದಾವೆ ಸಂಖ್ಯೆಃ 161/1999ರಲ್ಲಿ 7ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

10. ನನ್ನ ತಂದೆ ನನ್ನ ವಿರುದ್ಧ ಒ.ಎಸ್ ನಂ.164/1999ರಂತೆ ದಾವೆ ಮಾಡಿದ್ದರು ಎಂದರೆ ಸರಿ. ಅದರಲ್ಲಿ ನನ್ನ ಪರವಾಗಿ ರಿಟನ್ ಸ್ಟೇಟ್ ಮೆಂಟ್ ಹಾಕಿದ್ದೇನೆ ಎಂದರೆ ನೆನಪಿಲ್ಲ. ನಾನು ನೀಡಿದ ಮಾನಸಿಕ ಹಿಂಸೆ ತಾಳಲಾರದೇ ತಂದೆಯವರು ನನ್ನ ವಿರುದ್ಧ ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಹೆಣ್ಣು ಮಕ್ಕಳಿಗೆ ಯಾವುದೇ ಹಕ್ಕು ಹೋಗಬಾರದು ಎಂದು ನನ್ನ ಸಾಧನೆಯಾಗಿತ್ತು ಎಂದರೆ ಸರಿಯಲ್ಲ. ಈಗಲೂ ಕೂಡಾ ಅದೇ ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ನನ್ನ ವಿರುದ್ಧ ಪೋಲೀಸ್ ಕಂಪ್ಲೈಂಟ್ ಕೂಡಾ ನೀಡಿದ್ದರು ಎಂದರೆ ಸಾಕ್ಷಿ ನಂತರ ನನ್ನ ತಂದೆಯವರು ಸದರಿ ದಾವೆಯನ್ನು ವಿದ್ ಡ್ರಾ ಮಾಡಿದ್ದರು ಎನ್ನುತ್ತಾರೆ. ನನ್ನ ತಂದೆಯವರು ಅಸೌಖ್ಯದಲ್ಲಿದ್ದ ಕಾರಣ ನ್ಯಾಯಾಲಯಕ್ಕೆ ಹಾಜರಾಗದೇ ಅದನ್ನು ವಿದ್ ಡ್ರಾ ಮಾಡಿದ್ದರು ಎಂದರೆ ಸರಿಯಲ್ಲ. ಅವರು ಜೀವಿತ ಕಾಲದವರೆಗೂ ಆರೋಗ್ಯವಾಗಿದ್ದರು ಎನ್ನುತ್ತಾರೆ.

11 . ನನ್ನ ತಂದೆ ಪ್ಯಾಟ್ರಿಕ್ ಡಿಸಿಲ್ವಾ ರವರಿಗೆ ಅವರ ತಂದೆ ಕಾಮಿಲ್ ಡಿಸಿಲ್ವಾರವರೊಡನೆ ಬಾಂದವ್ಯ ಒಳ್ಳೆಯದಿತ್ತು ಎಂದರೆ ಸರಿಯಲ್ಲ. ಹಾಗೇ ಬಾಂಧವ್ಯ ಒಳ್ಳೆಯದಿರಲಿಲ್ಲ ಎಂದು ಹೇಗೆ ಹೇಳುತ್ತಿದ್ದೀರಾ ಎಂದರೆ ನಾನು ಕಣ್ಣಾರೆ ನೋಡಿದ್ದೆ ಎನ್ನುತ್ತಾರೆ. ಕಾಮಿಲ್ ಡಿಸಿಲ್ವಾ ರವರು 7ನೇ ಪ್ರತಿವಾದಿಯವರಿಗೆ ಮದುವೆ ಸಮಯದಲ್ಲಿ ಸಾಕಷ್ಟು ಚಿನ್ನಾಭರಣವನ್ನು ನೀಡಿದ್ದೆ ಎಂದು ಯಾವುದಾದರೂ ದಾಖಲೆಯಲ್ಲಿ ಹೇಳಿದ್ದುಂಟಾ ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ಕಾಮಿಲ್ ಡಿಸಿಲ್ವಾ ರವರು ಆ ರೀತಿ ಹೇಳಿಕೆ ನೀಡಿದ್ದಿದ್ದರೆ ಅದು ಸರಿಯೋ ತಪ್ಪೋ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

12. ಕಾಮಿಲ್ ಡಿಸಿಲ್ವಾರವರನ್ನು ಕೊನೆಯವರೆಗೂ ನೋಡಿಕೊಂಡದ್ದು ಪ್ಯಾಟ್ರಿಕ್ ಡಿಸಿಲ್ವಾರವರು ಎಂದರೆ ಸರಿಯಲ್ಲ, ಕಾಮಿಲ್ ಡಿಸಿಲ್ವಾರವರನ್ನು ಅವರ ತಂಗಿ ಕಾರ್ಮಿನ್ ಡಿಸಿಲ್ವಾ ಮತ್ತು ವಿಲಿಯಂ ಥಾಮಸ್ ಡಿಸಿಲ್ವಾ ರವರು ನೋಡಿಕೊಂಡಿದ್ದರು. ಆ ಸಮಯದಲ್ಲಿ ವಿಲಿಯಂ ಥಾಮಸ್ ಡಿಸಿಲ್ವಾ ರವರು ಮುಂಬಯಿಂದ ಬಂದು ಊರಿನಲ್ಲಿ ಇದ್ದರು. ಅವರು ಮುಂಬಯಿಯಲ್ಲಿ ಇದ್ದರು ಮತ್ತು ವಿದೇಶದಲ್ಲೂ ಕೆಲಸ ಮಾಡಿಕೊಂಡಿದ್ದರು. ಮುಂಬಯಿಯಲ್ಲಿರುವಾಗ ಉದ್ಯೋಗದಲ್ಲಿದ್ದರು. ಅವರು ಸುಮಾರು 1965-1966ರಿಂದಲೂ ಅವರು ಮುಂಬಯಿಯಲ್ಲಿ ಇದ್ದರು. ವಿಲಿಯಂ ಥಾಮಸ್ ಡಿಸಿಲ್ವಾ ರವರು ಕಾಮಿಲ್ ಡಿಸಿಲ್ವಾ ರವರ ನಡುವೆ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ಕಾಮಿಲ್ ಡಿಸಿಲ್ವಾ ರವರು ದೀರ್ಘ ಕಾಲದಿಂದ ಅಸೌಖ್ಯದಿಂದ ಮಲಗಿದಲ್ಲಿಯೇ ಇದ್ದರು ಎಂದರೆ ಸರಿಯಲ್ಲ.

13. ನಿಡಿ-75 ದಾಖಲೆಯನ್ನು ಈ ವ್ಯಾಜ್ಯ ಆದ ನಂತರ 6ನೇ ಪ್ರತಿವಾದಿ ವಿಲಿಯಂ ಥಾಮಸ್ ಡಿಸಿಲ್ವಾ ರವರು ನನಗೆ ಕೊಟ್ಟಿದ್ದರು. ಈ ವ್ಯಾಜ್ಯದ ಬಗ್ಗೆ ವಿಚಾರವಾಗಿ ಮಾತನಾಡುವಾಗ ಅವರು ಸದರಿ ದಾಖಲೆಯನ್ನು ಕೊಟ್ಟಿದ್ದರು. ಈ ದಾವೆಯಲ್ಲಿ ರಿಟನ್ ಸ್ಟೇಟ್ ಮೆಂಟ್ ತಯಾರಿಸಲು 6ನೇ ಪ್ರತಿವಾದಿಯವರು ಮಾಹಿತಿ ಕೊಟ್ಟಿದ್ದರು. ನಾನು ಹಾಕಿದಂತಹ ರಿಟನ್ ಸ್ಟೇಟ್ ಮೆಂಟ್ ಮತ್ತು 6ನೇ ಪ್ರತಿವಾದಿಯವರು ಹಾಕಿದಂತಹ ರಿಟನ್ ಸ್ಟೇಟ್ ಮೆಂಟ್ ಒಂದೇ ರೀತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-75ರಲ್ಲಿ 22ನೇ ಪಟ್ಟಿ ಎಂದು ಪುನಃ ಕೈಯಲ್ಲಿ (ಓವರ್ ರೈಟಿಂಗ್) ಬರೆದುದು ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೂಲತಃ ಆರೀತಿ ಬರಹ ದಾಖಲೆಯಲ್ಲಿ ಇರಲಿಲ್ಲ, ವ್ಯಾಜ್ಯಕ್ಕೆ ಬೇಕಾಗಿ ಆ ರೀತಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-75 ದಾಖಲೆಯ ಆಧಾರದಲ್ಲಿ ತಂದೆ ತೀರಿಕೊಂಡ ನಂತರ ಖಾತೆ ಬದಲಾವಣೆ ಆಗಿರುತ್ತದೆ. ವಿಲ್ ನಾಮೆ ಆಧಾರದಲ್ಲಿ ಪ್ರೊಬೇಟ್ ತೆಗೆಯಲಾಗಿದೆಯೇ ಎಂದರೆ ನನಗ ಮಾಹಿತಿ ಇಲ್ಲ. ನಿಡಿ-75 ದಾಖಲೆಯಲ್ಲಿ ಎಡ ಬದಿಯಲ್ಲಿ ಒಂದು ಗೆರೆ ಹಾಕಿದ್ದು ಅದನ್ನು ಯಾರು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ.

14. ನಿಡಿ-13 ದಾಖಲೆಯನ್ನು 6ನೇ ಪ್ರತಿವಾದಿ ನನಗೆ ಕೊಟ್ಟಿದ್ದರು. ಅವರು ಎಲ್ಲಿಂದ ತಂದು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಮಾಡಿದ್ದು ಕೆಳಗೆ ಸಹಿ ಮಾಡಿರುವವರು (ರೆವೆನ್ಯೂ ತಹಸೀಲ್ದಾರರು ಇರಬಹುದು) ಎನ್ನುತ್ತಾರೆ. ಸದರಿ ದಾಖಲೆ ಪ್ರಕಾರ ತಹಸೀಲ್ದಾರರ ಕಚೇರಿಯಲ್ಲಿ ಯಾವುದೇ ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಮತ್ತು 6ನೇ ಪ್ರತಿವಾದಿ ಸೇರಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಸದರಿ ದಾಖಲೆ ಬಗ್ಗೆ ತಾಲೂಕು ಕಚೇರಿಗೆ ಹೋಗಿ ನಾನು ವಿಚಾರಿಸಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**